ಯೋನಿಕುಂಡ ರಚನಾ ಕ್ರಮ

ಏಕಹಸ್ತಪ್ರಮಾಣದಲ್ಲಿ ಯೋನಿಕುಂಡ ರಚನೆ.

(ಹಸ್ತ = ೨೪ ಅಂಗುಲ = ೧೮ ಇಂಚು = ೧.೫ ಫೂಟು)

1. **ವೃತ್ತರಚನೆ :** [1] ವ್ಯಾಸ(DF) ೨೫.೩೫ ಇಂಚು, ತ್ರಿಜ್ಯ(OD) ೧೨.೬೭ ಇಂಚು.
2. **ಚತುರಸ್ರ ರಚನೆ :** ಮೊದಲು ರಚಿಸಿದ ವೃತ್ತದಲ್ಲಿ ದಿಕ್ಕುಗಳನ್ನು ಮತ್ತು ವಿದಿಕ್ಕುಗಳನ್ನು ಗುರುತಿಸಿ, ಎಲ್ಲಾ ವಿದಿಕ್ಕುಗಳನ್ನು ಸೇರಿಸಲಾಗಿ ಚಚ್ಚೌಕ ಸಿದ್ಧವಾಗುತ್ತದೆ. ಈ ಚಚ್ಚೌಕದ ಒಂದು ಭುಜಮಾನ(GD) = ೧೮ ಇಂಚುಗಳಿರುತ್ತವೆ.
3. **ಪೃಷ್ಠ ರಚನೆ :** ಚತುರಶ್ರವನ್ನು ಪೂರ್ವಾದಿ ದಿಗ್ರೇಖೆಗಳಿಂದ ನಾಲ್ಕು ಭಾಗ ಮಾಡಿ, ಕೆಳಗಿನ ಎರಡು ಭಾಗಗಳಿಗೆ (ನೈರುತ್ಯ ಮತ್ತು ವಾಯವ್ಯ ಚೌಕಗಳಿಗೆ) ಮಧ್ಯಬಿಂದುವನ್ನು ಗುರುತಿಸಬೇಕು. ಈ ಬಿಂದುವಿನಿಂದ(X,Y) ವೃತ್ತರಚಿಸಿದಾಗ ಅವು ಒಂದನ್ನೊಂದು ಛೇದಿಸಿಕೊಂಡು ಹೋಗಿ, ಆ ಯೋನಿ ಕುಂಡದ ಪೃಷ್ಠ ಸಿದ್ಧವಾಗುತ್ತದೆ.
4. **ಅಗ್ರರಚನೆ :** ವೃತ್ತಾಂತರ್ಗತ ಚಚ್ಚೌಕದ ಪೂರ್ವ ಬಿಂದುವಿನಿಂದ(C) ಮುಂದೆ ಪೂರ್ವಾಗ್ರವಾಗಿ ಚೌಕ ಭುಜಮಾನದ ೧/೫ ಅಂಶವನ್ನು (೧೮ ಇಂಚು + ३.೬ ಇಂಚು) ಹೆಚ್ಚಿಸಬೇಕು. ಹೆಚ್ಚಿಸಿದ(CA) ರೇಖಾಗ್ರ ಬಿಂದುವಿಗೆ(A) ಉತ್ತರ ದಕ್ಷಿಣ ದಿಗ್ವೃತ್ತದ (ಪೃಷ್ಠ ವೃತ್ತದ) ಭಾಗವನ್ನು ಸೇರಿಸಬೇಕು. ಹೀಗೆ ಸೇರಿದಾಗ ಯೋನಿ ಕುಂಡದ ತುದಿ ಸಿದ್ಧವಾಗುತ್ತದೆ. ಪೃಷ್ಠವೃತ್ತ ಛೇದ

[1] ಕುಂಡ ಮಂಟಪ ನಿರ್ಮಾಣ ವಿಧಿ ನಿರೂಪಣ ಗ್ರಂಥಗಳಲ್ಲಿ ವೃತ್ತದಿಂದ ಆಕೃತಿ ರಚನೆಯನ್ನು ಹೆಚ್ಚಾಗಿ ಒಪ್ಪುತ್ತಾರೆ.

ಬಿಂದುವಿನಿಂದ(B) ಯೋನ್ಯಗ್ರ ಬಿಂದುವಿನ ವರೆಗಿನ ಮಾನ (BA) ೧೧.೬ ಇಂಚುಗಳಾಗಿರುತ್ತವೆ.

5. **ಖಾತ :** ಹೀಗೆ ಯೋನಿ ಕುಂಡಾಕಾರ ಸಿದ್ಧವಾದ ಮೇಲೆ, ಅದೇ ಆಕಾರದಲ್ಲಿ ೧೮ ಇಂಚು ಆಳವಾಗಿ ಖಾತವನ್ನು ನಿರ್ಮಿಸಬೇಕು.

6. **ನಾಭಿ :** ಖಾತಭಾಗದಲ್ಲಿ ವೃತ್ತ ಮಧ್ಯ ಬಿಂದುವನ್ನು(O) ಗುರುತಿಸಿ, ಅಲ್ಲಿ ೧.೫ ಇಂಚಿನ ಘನದ ನಿರ್ಮಾಣ ಮಾಡಬೇಕು. ಈ ಘನದ ಮಧ್ಯದಲ್ಲಿ ಹುಕ್ಕಳಿನಾಕಾರದ ಸಣ್ಣ ಕುಳಿಯನ್ನು ಮಾಡಬೇಕು. ಅಥವಾ ೧.೫ ಇಂಚಿನ ಘನಚೌಕದಲ್ಲಿ ಪದ್ಮವನ್ನು ರಚಿಸಲೂ ಬಹುದು.

7. **ಕಂಠ :** ನೆಲದ ಸಮಪಾತಳಿಯಲ್ಲಿ ಯೋನಿ ಕುಂಡ ನಿರ್ಮಿಸಿದ ಮೇಲೆ, ಯೋನ್ಯಾಕಾರದ ಹೊರಗೆ ೦.೭೫ ಇಂಚು ನೆಲದ ಭಾಗವನ್ನು ಬಿಟ್ಟು ಅದರ ಹೊರಗೆ ಮೇಖಲೆಯನ್ನು ನಿರ್ಮಿಸಬೇಕು. ಹೀಗೆ ಬಿಟ್ಟ ೦.೭೫ ಇಂಚಿನ ನೆಲದ ಭಾಗವೇ ಕಂಠವೆನಿಸುತ್ತದೆ.

8. **ಮೇಖಲೆ :** ಮೊದಲ ಮೇಖಲೆಯು ೬.೭೫ ಇಂಚು ಎತ್ತರವೂ, ೪.೫ ಇಂಚು ಅಗಲವೂ ಇರಬೇಕು. ಎರಡನೇ ಮೇಖಲೆಯು ೪.೫ ಇಂಚು ಎತ್ತರವೂ ೨.೨೫ ಇಂಚು ಅಗಲವೂ ಇರಬೇಕು. ಇನ್ನು ಮೂರನೇ ಮೇಖಲೆಯು ೨.೨೫ ಇಂಚು ಎತ್ತರವೂ, ೨.೨೫ ಇಂಚು ಅಗಲವೂ ಇರಬೇಕು.

9. **ಯೋನಿ[2] :** ಯೋನ್ಯೇತರ ಏಕಹಸ್ತ ಕುಂಡಗಳಲ್ಲಿ ಯೋನಿಯ ಅಳತೆ, ಪೃಷ್ಠ ಛೇದಕ ಬಿಂದುವಿನಿಂದ ಯೋನ್ಯಗ್ರ ಬಿಂದುವಿನ ವರೆಗೆ ೬.೭೫ ಇಂಚುಗಳೆಂದೂ, ಪೃಷ್ಠ ಛೇದಕ ಬಿಂದುವಿನಿಂದೊಡಗೂಡಿದ ಅಗಲ ರೇಖಾ ಮಾನ(*FBE*) ೬.೦ ಇಂಚುಗಳೆಂದೂ ವಿವರಿಸಿದ್ದಾರೆ.

---

[2] ಪದ್ಮಕುಂಡಕ್ಕೆ ನಾಭಿ ಇರುವುದಿಲ್ಲ, ಯೋನಿ ಕುಂಡಕ್ಕೆ ಯೋನಿಯ ಅಗತ್ಯವೂ ಇಲ್ಲ! ಎಂದು ಬಹುಗ್ರಂಥಗಳು ಪ್ರತಿಪಾದಿಸಿವೆ.


poornapathi@gmail.com

10. **ಹಸ್ತಭೇದ ವಿಚಾರ :** ದ್ವಿಹಸ್ತದ ಯೋನಿ ಕುಂಡಕ್ಕೆ ವ್ಯಾಸ = ೩೫.೭೦ ಮತ್ತು ತ್ರಿಜ್ಯ = ೧೭.೮೫ ಇಂಚುಗಳಿರಬೇಕು. ಅಲ್ಲಿ ಚತುರ್ಭುಜದ ಭುಜಮಾನ ೨೫.೩೫ ಇಂಚುಗಳಿರುತ್ತವೆ.

ಚತುರ್ಹಸ್ತದ ಯೋನಿ ಕುಂಡಕ್ಕೆ ವ್ಯಾಸ = ೫೦.೭೦ ಇಂಚುಗಳು ಮತ್ತು ತ್ರಿಜ್ಯ = ೨೫.೩೫ ಇಂಚುಗಳಿರಬೇಕು. ಅಲ್ಲಿ ಚತುರ್ಭುಜದ ಒಂದು ಭುಜಮಾನ = ೩೬ ಇಂಚುಗಳಿರುತ್ತವೆ.

ಸಂಗ್ರಾಹಕಃ

ಪರಮೇಶ್ವರ ಪುಟ್ಟನಮನೆ



poornapathi@gmail.com